ಎಂ.ವಿ.ಸಿ. 1212/2022 ಪಿ.ಡಬ್ಲ್ಯೂ: 1

ಇಂದು ದಿಃ 04/10/2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ ಎಸ್ ವಕೀಲರಿಂದಃ

ಆದಿನ ನಾನು ಕಳಲೆಯಿಂದ ನಂಜನಗೂಡಿಗೆ ಹೋಗುತ್ತಿದ್ದೆ. ಕಳಲೆಯಿಂದ ನಂಜನಗೂಡಿಗೆ ಸುಮಾರು 3 ಕಿ ಮೀ ದೂರವಿದೆ. ನಾನು ಟಿ ವಿ ಎಸ್ ನಲ್ಲಿ ಹೋಗುತ್ತಿದ್ದೆ. ಅಪಘಾತವಾದ ಸಂದರ್ಭದಲ್ಲಿ ಚಾಲನಾ ಪರವಾನಗಿ ನನ್ನ ಬಳಿ ಇರಲಿಲ್ಲ. ನನ್ನ ವಾಹನದ ಹಿಂದೆ ಮತ್ತು ಮುಂದೆ ಹಲವಾರು ವಾಹಗಳು ನಿಂತಿತ್ತು ನಾನು ಮಧ್ಯದಲ್ಲಿ ನಿಲ್ಲಿಸಿದ್ದೆ. ಕಾರು ಎಷ್ಟು ದೂರದಿಂದ ಬರುತ್ತಿತ್ತು ಎಂದು ಗೊತ್ತಿಲ್ಲ. ನಾನು ಚರ್ಚಿನ ಎದುರುಗಡೆ ನೇರ ರಸ್ತೆಗೆ ಹೋಗಬೇಕಾಗಿತ್ತು. ನಾನು ರಸ್ತೆಯನ್ನು ದಾಟುತ್ತಿರಲಿಲ್ಲ ಆದರೆ ರಸ್ತೆಯ ಕ್ರಾಸಿನಲ್ಲಿ ನಿಲ್ಲಿಸಿದ್ದೆ. ನಾನು ನೇರವಾಗಿ ರಸ್ತೆಯ ಬಲಭಾಗಕ್ಕೆ ತಿರುಗಿದ ಕಾರಣ ನನ್ನ ನಿರ್ಲ್ಯಕ್ಷದಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಕಾರಣ ಚಾಲಕ ಕಾರನ್ನು ನಿಧಾನವಾಗಿ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಆ ದಿನ ವಾಹನವನ್ನು ಮಹಿಳಾ ಚಾಲಕ ಚಲಾಯಿಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಆ ದಿನ ಗಾಡ್ ಫ್ರೀ ಮಾತ್ಯೂಸ್ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ನನಗೆ ವಯಸ್ಸಾಗಿದ್ದು ಕಣ್ಣು ಸಹ ಸರಿ ಕಾಣುತ್ತಿರಲಿಲ್ಲ ಆ ಕಾರಣ ಅಕ್ಕಪಕ್ಕದ ವಾಹನಗಳನ್ನು ಗಮನಿಸದೇ ವಾಹನವನ್ನು ತಿರುಗಿಸಿದ ಕಾರಣ ಅಪಘಾತವಾಗಿತ್ತು ಎಂದರೆ ಸರಿಯಲ್ಲ. ನನ್ನ ಗಾಯಕ್ಕೆ ಶಸ್ತ್ರಚಿಕಿತ್ಸೆ ಮಾಡಿದ್ದಾರೆ ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ. ವೈದ್ಯಕೀಯ ಚಿಕಿತ್ಸೆಗೆ ನನಗೆ ತುಂಬಾ ಖರ್ಚಾಗಿದ್ದ ಬಗ್ಗೆ ದಾಖಲೆಯನ್ನು ನೀಡಿದ್ದೇನೆ. ನಾನು ಅರ್ಜಿಯಲ್ಲಿ ತೋರಿಸಿರುವ ಮೊತ್ತದಷ್ಟು ಖರ್ಚಾಗಿದ್ದರೂ ವೈದ್ಯರ ಜೊತೆ ಸೇರಿಕೊಂಡು ಸುಳ್ಳು ದಾಖಲೆ ನೀಡಿದ್ದೇನೆ ಎಂದರೆ ಸರಿಯಲ್ಲ. ನನಗೆ ವಯಸ್ಸಾದ ಕಾರಣ ನಾನು ಯಾವುದೇ ಕೃಷಿ ಚಟುವಟಿಕೆ ಮಾಡುತ್ತಿರಲಿಲ್ಲ ನಾನು ಬಾಡಿಗೆ ಕಾರಿಗೆ 1,000/- ಆಗುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಶಸ್ತ್ರಚಿಕಿತ್ಸೆ ಆಗದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿರುವ ಪ್ರಮಾಣದಷ್ಟು ನಾನು ಪರಿಹಾರ ಪಡೆಯಲು ಅರ್ಹನಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ನಂಜನಗೂಡು.